## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಲೋಕ್/ಬಿಜಿಎಂ/1691/2021
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ–18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 25/01/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ಅಖ್ತರ ಜಾನ್ವೇಕರ ತಂದೆ ನಜೀರ ಅಹ್ಮದ ಜಾನ್ವೇಕರ, ಮುಖ್ಯ ಇಂಜನೀಯರ್ (ನಿವೃತ್ತ) ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಉತ್ತರ ವಲಯ, ವಿಜಯಪುರ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

1. ಉತ್ತರಕನ್ನಡ ಜಿಲ್ಲೆ, ಕಾರವಾರ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಎದುರುದಾರರಾದ ಶ್ರೀ ಅಖ್ತರ ಜಾನ್ವೇಕರ ತಂದೆ ನಜೀರ ಅಹ್ಮದ ಜಾನ್ವೇಕರ, ಮುಖ್ಯ ಇಂಜನೀಯರ್ (ನಿವೃತ್ತ) ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಉತ್ತರ ವಲಯ, ವಿಜಯಪುರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ). ಶ್ರೀ ಮಾಧವ ನಾಯಕ ತಂದೆ ಬಾಬು ನಾಯಕ, ಪದ್ಮನಾಭ ನಗರ, ಕೆನರಾ ಬ್ಯಾಂಕ್ ಕಾಲೋನಿ, 6ನೇ ಅಡ್ಡ ರಸ್ತೆ, ನಂದನಗದ್ದಾ, ಕಾರವಾರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸವನ್ನು ಮಾಡಿಕೊಡಲು ಲಂಚದ ಹಣ ಕೇಳಿ ಪಡೆದುಕೊಂಡು ದುರ್ನಡತೆ ತೋರಿಸಿರುತ್ತಾರೆ ಎಂದು ಸಲ್ಲಿಸಿದ ವರದಿಯ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿದೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ:**– ದೂರುದಾರರು ಕ್ಲಾಸ್–1 ಗುತ್ತಿಗೆದಾರರಾಗಿದ್ದು 2015–16 ನೇ ಸಾಲಿನಲ್ಲಿ ಚಿಕ್ಕನೀರಾವರಿ ಇಲಾಖೆಯ ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಗೋಬ್ರಾಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗೋಬ್ರಾಳ ಹಳ್ಳಕ್ಕೆ ಅಡ್ಡಲಾಗಿ ಬಾಂದಾರ ನಿರ್ಮಾಣ ಕಾಮಗಾರಿಗೆ ಸಂಬಂಧಪಟ್ಟಂತೆ ಬಿಲ್ ಮೊತ್ತ ಸುಮಾರು ರೂ. 8,50,000/–, ಹಳಿಯಾಳ ತಾಲ್ಲೂಕಿನ ಬಾಂದಾರ ನಿರ್ವಹಣೆ ಕಾಮಗಾರಿ 2016–17ನೇ ಸಾಲಿಗೆ

ಸಂಬಂಧಪಟ್ಟ ಬಿಲ್ ಮೊತ್ತ ರೂ. 90,000/- ಹಾಗೂ 2016-17ನೇ ಸಾಲಿನ ಜೊಯಿಡಾ ತಾಲ್ಲೂಕಿನ ಬಾಂದಾರ ನಿರ್ಮಾಣ ಕಾಮಗಾರಿಗೆ ಸಂಬಂಧಪಟ್ಟಂತೆ ಬಿಲ್ ಮೊತ್ತ ಸುಮಾರು 13,50,000/- ರೂ. ಹೀಗೆ ಎಲ್ಲಾ ಕಾಮಗಾರಿಗಳ ಬಿಲ್ ಮೊತ್ತ ಸುಮಾರು ರೂ. 23,00,000/- ಗಳಾಗಿರುತ್ತದೆ. ಸದರಿ ಬಿಲ್‌ಗಳನ್ನು ಪಾವತಿಸಲು ಶ್ರೀ ಅಖ್ತರ ಜಾನ್ವೇಕರ ತಂದೆ ನಜೀರ ಅಹ್ಮದ ಜಾನ್ವೇಕರ, ಮುಖ್ಯ ಇಂಜನೀಯರ್ (ನಿವೃತ್ತ) ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಉತ್ತರ ವಲಯ, ವಿಜಯಪುರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಉಲ್ಲೇಖಿಸಲಾಗುವುದು) ಇವರು ಲಂಚದ ಹಣಕ್ಕೆ ಬೇಡಿಕೆಯನ್ನಿಟ್ಟು ದೂರುದಾರರಿಗೆ ಸತಾಯಿಸುತ್ತಿರುತ್ತಾರೆ. ದಿ: 23/07/2016 ರಂದು ದೂರುದಾರು ತನಗೆ ಬರತಕ್ಕ ಬಿಲ್ ಮೊತ್ತವನ್ನು ಚೆಕ್ ಮೊತ್ತಕ್ಕೆ ಹೋಲಿಕೆ ಮಾಡಿ ಸುಮಾರು ರೂ. 20,00,000/-ಕ್ಕೆ ಅಂದಾಜು ಮಾಡಿ ದೂರುದಾರರು ಸ್ವತ: ರೂ. 40,000/- ಗಳನ್ನು ಎದುರುದಾರರು ವಾಸಿಸುವ ಧಾರವಾಡದ ಸಂಪಿಗೆ ನಗರದಲ್ಲಿರುವ ಮನೆಗೆ ಹೋಗಿ ಹಣವನ್ನು ಕೊಟ್ಟಿರುತ್ತಾರೆ. ಸದರಿ ಸಮಯದಲ್ಲಿ ಎದುರುದಾರರು ಅವರ ಜೊತೆ ಮಾತನಾಡಿದ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ ಮಾಡಿಕೊಂಡಿರುತ್ತಾರೆ. ಆ ಸಂದರ್ಭದಲ್ಲಿ ಎದುರುದಾರರು ತಮ್ಮ ಸೂಟ್‌ಕೇಸ್‌ನಲ್ಲಿದ್ದ ದಾಖಲೆಗಳನ್ನು ತೆಗೆದು ಓದಿ ಕಳೆದ ಮಾರ್ಚ 2017 ರಲ್ಲಿ ದೂರುದಾರರಿಗೆ ರೂ. 15 ಲಕ್ಷ ಪಾವತಿಸಿರುವುದಾಗಿ ಹಾಗೂ ಈಗಿನ ಬಿಲ್ ಮೊತ್ತ 23 ಲಕ್ಷ ರೂ. ಪಾವತಿಸುತ್ತಿರುವುದಾಗಿ ಹೀಗೆ ಒಟ್ಟು ಮೊತ್ತ ರೂ. 38 ಲಕ್ಷ ಆಗುತ್ತದೆ, ಅದಕ್ಕೆ ಶೇಕಡಾ 2 ರ ಪ್ರಮಾಣದಲ್ಲಿ 76 ಸಾವಿರ ರೂ. ಆಗುತ್ತದೆ. ಉಳಿದ 36 ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದು ಹೇಳಿದಾಗ ದೂರುದಾರರು ಈ ಮೊದಲೇ ಕಾರ್ಯನಿರ್ವಾಹಕ ಅಭಿಯಂತರರಿಗೆ ಕೊಟ್ಟಿದ್ದೇನೆ ಎಂದು ಹೇಳಿದಾಗ ಎದುರುದಾರರು ದೂರುದಾರರಿಗೆ "ಎಲ್ಲಾ ಗುತ್ತಿಗೆದಾರರು ಹಳೆಯದನ್ನು ಕೊಟ್ಟು ತಮ್ಮ ಕೆಲಸ ಮಾಡಿಕೊಂಡಿದ್ದಾರೆ. ನೀವೂ ಕೊಡಬೇಕು" ಎಂದು ಹೇಳಿರುತ್ತಾರೆ. ಅದಾದ ನಂತರ ದಿನಾಂಕ 10/08/2017 ರ ಮಧ್ಯಾಹ್ನ 12-10 ಘಂಟೆಗೆ ಎದುರುದಾರರು ದೂರುದಾರರಿಗೆ ಕರೆ ಮಾಡಿ "ನೀನೊಮ್ಮೆ ಬಂದು ಭೇಟಿಯಾಗುವುದು ಒಳ್ಳೆಯದು" ಎಂದು ಹೇಳಿ ಮಾತನ್ನು ಮುಂದುವರೆಸುತ್ತಾ "ನೀನು ಕೊಡಬೇಕಾದ ಹಣ ಕೊಡು" ಎನ್ನುವ ವಿಚಾರದಲ್ಲಿ ಮಾತನಾಡಿ "ಶುಕ್ರವಾರ ರಾತ್ರಿ ಇಲ್ಲವೆ ಶನಿವಾರ-ರವಿವಾರದಲ್ಲಿ ದಾಂಡೇಲಿಗೆ ಬಾ ನಾನು ಫೋನ್ ಮಾಡುತ್ತೇನೆ" ಎಂದು ತಿಳಿಸಿರುತ್ತಾರೆ. ಆಗ ದೂರುದಾರರು "ನಾನು ತುಂಬಾ ತೊಂದರೆಯಲ್ಲಿದ್ದೇನೆ ನೀವು ಹಣ ಪಾವತಿ ಮಾಡಿದ ನಂತರವೇ ಕೊಡುತ್ತೇನೆ" ಎಂದಾಗ ಎದುರುದಾರರು ದೂರುದಾರರಿಗೆ "ನಿನ್ನನ್ನು ಹುಡುಕುತ್ತಾ ಯಾರು ಬರುತ್ತಾರೆ" ಎಂದು ಹೇಳಿರುತ್ತಾರೆ. ದೂರುದಾರರಿಗೆ ಯಾವುದೇ ರೀತಿಯಲ್ಲಿ ಲಂಚ ಕೊಡುವ ಮನಸ್ಸು ಇರದೇ ಇದ್ದುದರಿಂದ ಎದುರುದಾರರು ಹೇಳಿದ ಪ್ರಕಾರ ಶನಿವಾರ ಎದುರುದಾರರನ್ನು ಭೇಟಿಯಾಗಲು ದಾಂಡೇಲಿಗೆ ಹೋಗಿರುವುದಿಲ್ಲ.

ದಿನಾಂಕ 17/08/2017 ರಂದು ಮಧ್ಯಾಹ್ನ ಸುಮಾರು 2-12 ಘಂಟೆಗೆ ಎದುರುದಾರರು ದೂರುದಾರರಿಗೆ ಕರೆ ಮಾಡಿ "ನೀನು ಬರುವುದೇ ಇಲ್ಲ ನೀನು ಫ್ರೀ ಇರುವುದೇ ಇಲ್ಲ, ನಾನು ಮೂರು ದಿವಸಗಳಿಂದ ದಾಂಡೇಲಿಯಲ್ಲಿದ್ದೇನೆ. ನಿನಗೆ ಯಾವಾಗ ಫ್ರೀ ಆಗುತ್ತೆ ಆವಾಗ ಬಾ ನಾನು ರವಿವಾರದವರೆಗೆ ಧಾರವಾಡದಲ್ಲಿರುತ್ತೇನೆ. ಅಲ್ಲಿಯೇ ಬಾ" ಎಂದು ಹೇಳಿರುತ್ತಾರೆ. ಆಗ ದೂರುದಾರರು "ಹಣ ಬಿಡುಗಡೆ ಮಾಡಿದ್ದೀರಾ" ಎಂದು ಕೇಳಿದಾಗ ಎದುರುದಾರರು "ಇಲ್ಲ 22ನೇ ತಾರೀಖಿಗೆ ಬಿಡುಗಡೆಯಾಗುತ್ತದೆ, ಎಲ್ಲಿಯವರೆಗೆ ನನ್ನದೆಲ್ಲ ಕ್ಲೀಯರ್ ಆಗುವುದಿಲ್ಲವೋ ಅಲ್ಲಿಯವರೆಗೆ ಬಿಡುಗಡೆ ಆಗುವುದಿಲ್ಲ ಅದಕ್ಕಿಂತ ಮೊದಲು ಬಂದು ವ್ಯವಹಾರ ಮುಗಿಸಿಕೋ" ಎನ್ನುವ ಅರ್ಥದಲ್ಲಿ ಮಾತನಾಡಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

3. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 18/08/2017 ರಂದು ಸಾಯಂಕಾಲ 4-30 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಉತ್ತರ ಕನ್ನಡ ಜಿಲ್ಲೆ, ಕಾರವಾರ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದಾಗ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 07/2017 ಪಿ.ಸಿ. ಕಾಯಿದೆ ಕಲಂ 7 ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ಮಹೇಂದ್ರ ಸುರೇಶ ಗೌಡ ಮತ್ತು ದೀಪಕ ತಂದೆ ಗಣಪತಿ ನಾಯ್ಕ ಇವರನ್ನು ಬರಮಾಡಿಕೊಂಡು, ತನಿಖಾಧಿಕಾರಿಗಳು ಪಂಚರುಗಳ ಪರಿಚಯ ಮಾಡಿಕೊಂಡಿರುತ್ತಾರೆ ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ ದೂರಿನ ಪ್ರತಿಯನ್ನು ಹಾಗೂ ಪ್ರಥಮ ವರ್ತಮಾನ ವರದಿಯನ್ನು ಪಂಚರುಗಳಿಗೆ ತನಿಖಾಧಿಕಾರಿಗಳು ನೀಡಿ ಅದರಲ್ಲಿರುವ ವಿಷಯವನ್ನು ಓದಿ ತಿಳಿದುಕೊಳ್ಳಲು ಸೂಚಿಸಿರುತ್ತಾರೆ. ನಂತರ ದೂರುದಾರರು ಒಂದು ಮೆಮೋರಿ ಕಾರ್ಡನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿ ತಮ್ಮ ಹಾಗೂ ಎದುರುದಾರರ ನಡುವೆ ನಡೆದ ಸಂಭಾಷಣೆಯನ್ನು ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ಸಂಭಾಷಣೆಗಳನ್ನು ಮೆಮೋರಿ ಕಾರ್ಡಿಗೆ ಕಾಪಿ ಮಾಡಿ ಮೆಮೋರಿ ಕಾರ್ಡನ್ನು ಹಾಜರುಪಡಿಸುತ್ತಿರುವುದಾಗಿ ತಿಳಿಸಿದಾಗ ತನಿಖಾಧಿಕಾರಿಗಳು ಪಂಚರ ಸಮಕ್ಷಮ ಸದರಿ ಮೆಮೋರಿ ಕಾರ್ಡ್‌ನ್ನು ಕಾರ್ಡ್ ರೀಡರ್ ಮೂಲಕ ಲ್ಯಾಪ್‌ಟಾಪ್‌ಗೆ ಕನೆಕ್ಟ್ ಮಾಡಿ ಕಾಪಿ ಮಾಡಿ ಎರಡು ಡಿ.ವಿ.ಡಿ.ಗಳಿಗೆ ವರ್ಗಾಯಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರು ಲಂಚ ಕೇಳಿದರೆ ಕೊಡಲೆಂದು ತಂದಿರುವ ಹಣವನ್ನು ಹಾಜರುಪಡಿಸುವಂತೆ ಹೇಳಿದಾಗ ದೂರುದಾರರು ಹಣವನ್ನು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯವರ ಸೂಚನೆಯಂತೆ ಪಂಚ ಸಾಕ್ಷಿ-1 ರವರು ಸದರಿ ನೋಟುಗಳನ್ನು ಪರಿಶೀಲಿಸಿದಾಗ ರೂ. 500/- ಮುಖ ಬೆಲೆಯ 72

ನೋಟುಗಳು ಒಟ್ಟು ರೂ. 36,000/- ಗಳನ್ನು ಹಾಜರುಪಡಿಸಿದಾಗ ಪಂಚ ಸಾಕ್ಷಿ-1 ರವರು ಹೇಳಿದಂತೆ ಪಂಚ ಸಾಕ್ಷಿ-2 ರವರು ಸದರಿ ನೋಟಿನ ನಂಬರ್‌ಗಳನ್ನು ಒಂದು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ತನಿಖಾಧಿಕಾರಿಗಳು ಲಂಚ ಕೇಳಿದರೆ ನೀಡಲು ತಂದಿದ್ದ ರೂ.36,000/- ಮೌಲ್ಯದ ನೋಟುಗಳ ಎರಡೂ ಬದಿಗಳಿಗೆ ತನಿಖಾಧಿಕಾರಿಯವರ ಸೂಚನೆಯ ಮೇರೆಗೆ ಸಿಬ್ಬಂದಿಯವರು ಫಿನಾಪ್ತಲಿನ್ ಪುಡಿಯ ಲೇಪನ ಮಾಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಪಂಚ ಸಾಕ್ಷಿ-2 ರವರಿಗೆ ದೂರುದಾರರ ಅಂಗ ಶೋಧನೆ ಮಾಡುವಂತೆ ತಿಳಿಸಿದಾಗ ಅವರು ದೂರುದಾರರ ಪ್ಯಾಂಟಿನ ಮುಂದಿನ ಬಲಗಡೆ ಜೇಬಿನಲ್ಲಿ ಒಂದು ಪರ್ಸ್ ಇದ್ದಿದ್ದನ್ನು ತೆಗೆದು ಜೇಬನ್ನು ಖಾಲಿ ಮಾಡಿಸಿರುತ್ತಾರೆ. ನಂತರ ಪಂಚ-1 ನೇದವರು ತನಿಖಾಧಿಕಾರಿಯವರ ಸೂಚನೆಯಂತೆ ತನಿಖಾಧಿಕಾರಿಯವರ ಟೇಬಲ್ ಮೇಲೆ ಇಡಲಾಗಿದ್ದ ಫಿನಾಪ್ತಲಿನ್ ಪೌಡರ್ ಸವರಿದ ನೋಟುಗಳನ್ನು ತಮ್ಮ ಬಲಗೈ ನಲ್ಲಿ ತೆಗೆದುಕೊಂಡು ಎರಡೂ ಕೈಗಳಿಂದ ಎಣಿಸಿ ದೂರುದಾರರ ಪ್ಯಾಂಟಿನ ಮುಂಭಾಗದ ಬಲಗಡೆ ಜೇಬಿನಲ್ಲಿ ಇರಿಸಿರುತ್ತಾರೆ. ನಂತರ ಪಂಚ-1 ರವರು ತಮ್ಮ ಎರಡೂ ಕೈಗಳ ಬೆರಳುಗಳನ್ನು ಬಟ್ಟಲಿನಲ್ಲಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದುಕೊಂಡಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳು ಪಂಚ ಸಾಕ್ಷಿ-1 ರವರಿಗೆ ಸೋಪಿನಿಂದ ಕೈ ತೊಳೆಯುವಂತೆ ಸೂಚಿಸಿದಾಗ ಅವರು ಕೈಗಳನ್ನು ತೊಳೆದುಕೊಂಡಿರುತ್ತಾರೆ. ದೂರುದಾರರಿಗೆ ತನಿಖಾಧಿಕಾರಿಗಳು ಎದುರುದಾರರ ಬಳಿ ಹೋದಾಗ ಮೊದಲು ತಮ್ಮ ಕೆಲಸದ ಬಗ್ಗೆ ಕೇಳಬೇಕು ಆಗ ಎದುರುದಾರರು ಲಂಚವನ್ನು ಬೇಡಿದರೆ ಮಾತ್ರ ತಮ್ಮ ಬಳಿ ಇರುವ ಫಿನಾಪ್ತಲಿನ್ ಪೌಡರ್ ಸವರಿರುವ ನೋಟುಗಳನ್ನು ಕೊಟ್ಟು ಎದುರುದಾರರಿಗೆ ಅನುಮಾನ ಬಾರದಂತೆ ವಾಯ್ಸ್ ರೆಕಾರ್ಡರ್‌ನಲ್ಲಿ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಬೇಕು ಮತ್ತು ತಮಗೆ ಕಾಣುವಂತೆ ಪ್ಯಾಂಟಿನ ಎಡಜೇಬಿನಿಂದ ಕರವಸ್ತ್ರ ತೆಗೆದು ಮುಖವರೆಸಿಕೊಳ್ಳುವ ಮೂಲಕ ಸಂಜ್ಞೆಯನ್ನು ನೀಡಬೇಕೆಂದು ತಿಳಿಸಿ ವಾಯ್ಸ್ ರೆಕಾರ್ಡರ್‌ನ್ನು ನೀಡಿರುತ್ತಾರೆ. ತನಿಖಾಧಿಕಾರಿಗಳು ಪಂಚ ಸಾಕ್ಷಿ-2 ರವರಿಗೆ ನೆರಳು ಸಾಕ್ಷಿಯಾಗಿ ನೇಮಿಸಿ ದೂರುದಾರರನ್ನು ಅನುಸರಿಸಿಕೊಂಡು ಹೋಗಿ ದೂರುದಾರರು ಮತ್ತು ಎದುರುದಾರರ ಮಧ್ಯ ನಡೆಯುವ ಘಟನಾವಳಿಗಳನ್ನು ಗಮನಿಸಿ ತಮಗೆ ತಿಳಿಸಬೇಕೆಂದು ಹೇಳಿರುತ್ತಾರೆ. ತನಿಖಾಧಿಕಾರಿಗಳು, ಪಂಚರು, ದೂರುದಾರರು ಹಾಗೂ ಭಾಗವಹಿಸಿದ ಸಿಬ್ಬಂದಿಗಳು ಸೋಪು ಹಚ್ಚಿ ಕೈಗಳನ್ನು ತೊಳೆದುಕೊಂಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಸಿ ದಿ: 19/08/2017 ರಂದು ಬೆಳಿಗ್ಗೆ 6-30 ಘಂಟೆಯಿಂದ 9-00 ಘಂಟೆಯವರೆಗೆ ಉತ್ತರ ಕನ್ನಡ ಜಿಲ್ಲೆ ಎಸಿಬಿ ಕಛೇರಿಯಲ್ಲಿ ಲ್ಯಾಪ್‌ಟಾಪ್ ಮೂಲಕ ಗಣಕೀಕರಣ ಮಾಡಿದ ವಹಿಸುವಿಕೆ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

5. ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಎರಡು ಸರ್ಕಾರಿ ವಾಹನಗಳಲ್ಲಿ ಹೊರಟು ಬಾಳೇಗುಳಿ-ಯಲ್ಲಾಪುರ-ಹಳಿಯಾಳ ಮಾರ್ಗವಾಗಿ ಧಾರವಾಡದ ಬೇಂದ್ರೆ ನಗರದ ಜಂಕ್ಷನ್ ಹತ್ತಿರ ತಲುಪಿ ವಾಹನಗಳನ್ನು ನಿಲ್ಲಿಸಿ, ದೂರುದಾರರು ಹಾಗೂ ನೆರಳು ಸಾಕ್ಷಿಯಾದ ಶ್ರೀ ದೀಪಕ ಬಿನ್ ಗಣಪತಿ ನಾಯ್ಕರವರಿಗೆ ವಹಿಸಿಕೊಡುವ ಪಂಚನಾಮೆಯ ಸಮಯದಲ್ಲಿ ನೀಡಿದ ಸೂಚನೆಗಳನ್ನು ಮತ್ತೊಮ್ಮೆ ತಿಳಿಸಿ ಎದುರುದಾರರು ವಾಸಿಸುವ ಬೇಂದ್ರೆ ನಗರದ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ. ಅವರಿಬ್ಬರೂ ಮಧ್ಯಾಹ್ನ 1-10 ಘಂಟೆಗೆ ಎದುರುದಾರರ ಮನೆಯೊಳಗೆ ಹೋಗಿ ನಂತರ ಸುಮಾರು 1-40 ಘಂಟೆಗೆ ಎದುರುದಾರರ ಮನೆಯಿಂದ ಹೊರಗಡೆ ಬಂದಿದ್ದು ಆದರೆ ವಹಿಸುವಿಕೆ ಪಂಚನಾಮೆ ಕಾಲಕ್ಕೆ ನೀಡಿದ ಸಂಜ್ಞೆಯನ್ನು ನೀಡಿರುವುದಿಲ್ಲ. ಆದರೆ ಅವರಿಬ್ಬರೂ ತನಿಖಾಧಿಕಾರಿಯವರ ಹತ್ತಿರ ಬಂದು ಹೇಳಿದ್ದೇನೆಂದರೆ ತಾವು ಒಳಗಡೆ ಹೋಗಿ ಎದುರುದಾರರನ್ನು ಭೇಟಿಯಾದಾಗ ಎದುರುದಾರರು ಮತ್ತೊಮ್ಮೆ 36,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಆದರೆ ಎದುರುದಾರರ ಹತ್ತಿರ ಇನ್ನೂ ಎಲ್.ಓ.ಸಿ. ಬಾರದೇ ಇದ್ದುದರಿಂದ ಲಂಚದ ಹಣವನ್ನು ಸ್ವೀಕರಿಸಲು ನಿರಾಕರಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ದಿ: 22/08/2017 ಅಥವಾ 24/08/2017 ರಂದು ಎಲ್.ಓ.ಸಿ. ಬರುವ ಸಾಧ್ಯತೆ ಇದೆ, ಆ ಬಳಿಕ ಬಂದು ಲಂಚದ ಹಣವನ್ನು ಕೊಡುವಂತೆ ಅಥವಾ ಲಂಚದ ಹಣವನ್ನು ಫರೀದ್ ಎಂಬುವವನಿಗೆ ನೀಡುವಂತೆ ಅಥವಾ ಎನ್‌ಇಎಫ್‌ಟಿ ಮೂಲಕ ನೀಡುವಂತೆ ಎದುರುದಾರರು ತಿಳಿಸಿರುತ್ತಾರೆ ಎಂದು ಹೇಳಿರುತ್ತಾರೆ. ಎದುರುದಾರರು ದೂರುದಾರರೊಂದಿಗೆ ಈಗಾಗಲೇ ನಡೆಸಿದ ಸಂಭಾಷಣೆಯನ್ನು ಅವರು ವಾಯ್ಸ್ ರೆಕಾರ್ಡರ್‌ನಲ್ಲಿ ಮಾಡಿಕೊಂಡಿರುತ್ತೇನೆಂದು ತಿಳಿಸಿರುತ್ತಾರೆ. ಆಗ ತನಿಖಾಧಿಕಾರಿಗಳು ಟ್ರಾಪ್ ಮಾಡುವ ಕಾರ್ಯಕ್ರಮವನ್ನು ಸದ್ಯಕ್ಕೆ ಮುಂದೂಡುವುದು ಒಳ್ಳೆಯದು ಎಂದು ತಿಳಿಸಿ ವಾಪಸ್ಸು ಠಾಣೆಗೆ ಬಂದು ದೂರುದಾರರು ಹಾಜರುಪಡಿಸಿದ ವಾಯ್ಸ್ ರೆಕಾರ್ಡರನ್ನು ಲ್ಯಾಪ್‌ಟಾಪ್‌ಗೆ ಕನೆಕ್ಟ್ ಮಾಡಿ ಅದರಲ್ಲಿರುವ ಸಂಭಾಷಣೆಯನ್ನು ಎರಡು ಡಿ.ವಿ.ಡಿಗಳಿಗೆ ಡೌನ್ ಲೋಡ್ ಮಾಡಿಕೊಂಡು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ.

6. ನಂತರ ಎದುರುದಾರರಿಂದ ಸದರಿ ಆರೋಪಗಳಿಗೆ ಸಂಬಂದಿಸಿದಂತೆ, ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ ಅವರಿಂದ ಸಮಜಾಯಿಷಿಯನ್ನು ಕೇಳಲಾಯಿತು. ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿನಾಂಕ 14/09/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ಎದುರುದಾರರು ತಮ್ಮ ಮೇಲಿನ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇದ್ದು ವಿಚಾರಣಾ ಹಂತದಲ್ಲಿರುತ್ತದೆ ಮತ್ತು ತಾನು ಕರ್ತವ್ಯದಿಂದ ನಿವೃತ್ತಿಯಾಗಿ ನಾಲ್ಕು ವರ್ಷಗಳಾಗಿರುತ್ತವೆ ಎಂದು ನಮೂದಿಸಿರುತ್ತಾರೆ.ದಾಖಲೆಗಳ ಪ್ರಕಾರ ಎದುರುದಾರರು ದಿ:31/08/2017 ರಂದು

ನಿವೃತ್ತಿಯಾಗಿರುತ್ತಾರೆ. ಆದರೆ ಕರ್ನಾಟಕ ಉಚ್ಛನ್ಯಾಯ್ಯಾಲಯವು ರಿಟ್ ಪಿಟಿಷನ್ ಸಂ.19386/2016 ರಲ್ಲಿ ದಿ:12/02/2021 ರಂದು ಆದೇಶ ಮಾಡಿ ಭ್ರಷ್ಟಾಚಾರ ನಿಗ್ರಹದಳದವರು ಸಲ್ಲಿಸಿದ ಎಲ್ಲಾ ದೋಷಾರೋಪಣ ಪಟ್ಟಿಗಳನ್ನು ಈ ಸಂಸ್ಥೆಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸುವಂತೆ ನಿರ್ದೇಶಿಸಿದ್ದು, ಸದರಿ ಆದೇಶದನ್ವಯ ಭ್ರಷ್ಟಾಚಾರ ನಿಗ್ರಹದಳದವರು ದಿ: 23-04-2021 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟ ದೋಷಾರೋಪಣ ಪಟ್ಟಿಯ ಪ್ರತಿಯನ್ನು ಕಳುಹಿಸಿಕೊಟ್ಟಿರುತ್ತಾರೆ. ತದನಂತರ, ವಿಳಂಬವಿಲ್ಲದೆ ಈ ಪ್ರಕರಣವನ್ನು ದಾಖಲಿಸಿಕೊಂಡು, ಅಗತ್ಯ ನಡವಳಿಕೆಗಳನ್ನು ನಡೆಸಲಾಗಿದೆ. ಅಲ್ಲದೆ ಇದೊಂದು ಭ್ರಷ್ಟಾಚಾರದ ಗಂಭೀರ ಪ್ರಕರಣವಾಗಿದ್ದು, ಇಂತಹ ಪ್ರಕರಣಗಳಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮ 214 (2) (ಬಿ) (ii) ಅನ್ವಯಿಸುವುದು ಸೂಕ್ತವಾಗಿರುವುದಿಲ್ಲ.

7. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ ಇವುಗಳನ್ನು ಪರಿಶೀಲಿಸಿದಾಗ ದೂರುದಾರರು ಕ್ಲಾಸ್ -1 ಗುತ್ತಿಗೆದಾರರಾಗಿದ್ದು ಚಿಕ್ಕ ನೀರಾವರಿ ಇಲಾಖೆ, ಕಾರವಾರ ಜಿಲ್ಲೆಯ ಹಳಿಯಾಳ ಹಾಗೂ ಜೋಯಿಡಾ ತಾಲ್ಲೂಕುಗಳಲ್ಲಿ ವಿವಿಧ ಕಾಮಗಾರಿಗಳನ್ನು ಮಾಡಿದ ಒಟ್ಟು ಬಿಲ್ ಮೊತ್ತ 38 ಲಕ್ಷದಲ್ಲಿ 15 ಲಕ್ಷ ಹಣವನ್ನು ಇಲಾಖೆಯಿಂದ ಪಾವತಿಸಲಾಗಿದ್ದು ಇನ್ನೂ 23 ಲಕ್ಷ ಬಿಲ್ಲು ಪಾವತಿಸಲು ಬಾಕಿ ಇದ್ದಾಗ ದೂರುದಾರರು ಎದುರುದಾರರನ್ನು ಕೇಳಿಕೊಂಡಾಗ ಎದುರುದಾರರು ದೂರುದಾರರಿಗೆ ನಿಮ್ಮ ಒಟ್ಟು ಬಿಲ್ಲು 38 ಲಕ್ಷಗಳಾಗಿದ್ದು ಅದರಲ್ಲಿ ಶೇಕಡಾ 2% ರ ಪ್ರಮಾಣದಲ್ಲಿ ರೂ. 76,000/- ಲಂಚ ಕೊಡಬೇಕಾಗುತ್ತದೆ. ಅದರಲ್ಲಿ 40,000/- ರೂ. ಲಂಚದ ಹಣವನ್ನು ಈಗಾಗಲೇ ಕೊಟ್ಟಿರುತ್ತೀರಿ. ಉಳಿದ 36,000/- ರೂ. ಲಂಚದ ಹಣವನ್ನು ನೀಡಿದರೆ ಉಳಿದ ಬಿಲ್ಲನ್ನು ಪಾವತಿಸುತ್ತೇನೆ ಎಂದು ಹೇಳಿರುವ ಸಂಭಾಷಣೆಯ ಧ್ವನಿ ಮುದ್ರಿಕೆಯಿಂದ, ದಾಖಲೆಗಳು ಮತ್ತು ಸಾಕ್ಷಿದಾರರ ಹೇಳಿಕೆಗಳಿಂದ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟು ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

8. ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ಅಖ್ತರ ಜಾನ್ವೇಕರ ತಂದೆ ನಜೀರ ಅಹ್ಮದ ಜಾನ್ವೇಕರ, ಮುಖ್ಯ ಇಂಜನೀಯರ್ (ನಿವೃತ್ತ) ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಉತ್ತರ ವಲಯ, ವಿಜಯಪುರ ಜಿಲ್ಲೆ ಇವರ ವಿರುದ್ಧ

ಕರ್ನಾಟಕ ನಾಗರೀಕ ಸೇವಾ ನಿಯಮ 214 (2) (ಬಿ) (i) ಅಡಿಯಲ್ಲಿ ಶಿಸ್ತು ನಡವಳಿಕೆಯನ್ನು ಆರಂಭಿಸಿ ಮತ್ತು ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮ 214 (2) (ಬಿ) (iii) ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

P. Vishwanatha
25/1/2022

(ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ)
ಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.